ರೈತರ ಮೇಲಿನ ಮೊಕದ್ದಮೆಗಳು

537 (747) ಶ್ರೀ ಗೋವಿಂದ ಎಂ. ಕಾರಜೋಳ, ಮಾನ್ಯ ಗೃಹ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) 2011ರಲ್ಲಿ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನಲ್ಲಿ ನಡೆದ ರೈತರ ಮೇಲೆ ಹೂಡಿದ್ದ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯಲು ಸಂಪುಟ ಅನುಮೋದನೆಯಾಗಿದ್ದರು ಸಹ ಇದುವರೆವಿಗೂ ಮೊಕದ್ದಮೆಗಳನ್ನು ವಾಪಸ್ಸು ಪಡೆಯದೇ ಇರಲು ಕಾರಣವೇನು;

(ಆ) ಹಾಗಿದ್ದಲ್ಲಿ, ಎಷ್ಟು ದಿನಗಳಲ್ಲಿ ಸರ್ಕಾರ ಆದೇಶವನ್ನು ಹೊರಡಿಸಲು ಕ್ರಮ ಕೈಗೊಳ್ಳವುದು?

ಶ್ರೀ ಕೆ.ಜೆ. ಜಾರ್ಜ್(ಮಾನ್ಯ ಗೃಹ ಸಚಿವರು):–

(ಅ) ಸರ್ಕಾರವು ಮೊಕದ್ದಮೆಗಳನ್ನು ಅಭಿಯೋಜನೆಯಿಂದ ಹಿಂಪಡೆಯುತ್ತಿರುವುದನ್ನು ಪ್ರಶ್ನಿಸಿ ಶ್ರೀ ಅಮೃತೇಶ್ ರವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ (ಪಿ.ಐ.ಎಲ್) ಸಂಖ್ಯೆ 51049/2012 ಇನ್ನೂ ವಿಚಾರಣೆಯಲ್ಲಿದೆ. ಸದರಿ ವಿಷಯದಲ್ಲಿ ಅಡ್ವೋಕೇಟ್ ಜನರಲ್ ಇವರ ಅಭಿಪ್ರಾಯವನ್ನು ನಿರೀಕ್ಷಿಸಿದೆ. ಆದುದರಿಂದ, ಸದರಿ ಪ್ರಕರಣಗಳನ್ನು ಹಿಂಪಡೆಯುವ ಬಗ್ಗೆ ಸರ್ಕಾರದಿಂದ ಯಾವುದೇ ಆದೇಶವನ್ನು ಹೊರಡಿಸಿರುವುದಿಲ್ಲ ಹಾಗೂ ಮೊಕದ್ದಮೆಗಳನ್ನು ಹಿಂಪಡೆಯಲು ಅಭಿಯೋಜನಾ ಇಲಾಖೆಗೆ ನಿರ್ದೇಶನ ನೀಡಿರುವುದಿಲ್ಲ.

(ಆ) ಸದರಿ ರಿಟ್ ಅರ್ಜಿಯ ಬಗ್ಗೆ ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯ ಪಡೆದ ನಂತರ ಮೊಕದ್ದಮೆಯನ್ನು ಹಿಂಪಡೆಯುವ ಬಗ್ಗೆ ಪರಿಶೀಲಿಸಲಾಗುವುದು.

ಕುಡಿಯುವ ನೀರಿನ ಸಮಸ್ಯೆ

516 (937) ಶ್ರೀ ಬಸವರಾಜ್ ಬಿ.ಎ. (ಕೆ.ಆರ್. ಪುರಂ) :– ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕೆ.ಆರ್. ಪುರಂ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಈ ಕ್ಷೇತ್ರಕ್ಕೆ ಕುಡಿಯಲು ಯಾವ ಯಾವ ಪ್ರದೇಶಗಳಿಗೆ ಕಾವೇರಿ ನೀರನ್ನು ಒದಗಿಸಲಾಗುತ್ತಿದೆ (ವಿವರ ನೀಡುವುದು)

(ಈ) ಈ ಕ್ಷೇತ್ರದ ವ್ಯಾಪ್ತಿಯ ಎಲ್ಲಾ ಪ್ರದೇಶಗಳಿಗೂ ಕುಡಿಯುವ ಕಾವೇರಿ ನೀರನ್ನು ಸರಬರಾಜು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಉ) ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿಯೇ ಕುಡಿಯುವ ನೀರನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಸಿದ್ದರಾಮಯ್ಯ, (ಮಾನ್ಯ ಮುಖ್ಯಮಂತ್ರಿಗಳು):–

(ಅ) ಗಮನಕ್ಕೆ ಬಂದಿದೆ.

(ಆ) ಕೆ.ಆರ್. ಪುರಂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಳೆಯ ನಗರಸಭಾ ಪ್ರದೇಶವು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 110 ಹಳ್ಳಿಗಳ ಪ್ರದೇಶವು ಸೇರಿರುತ್ತದೆ. ಇವುಗಳಲ್ಲಿ ಹಿಂದಿನ ಕೆ.ಆರ್.ಪುರಂ ನಗರ ಸಭೆ ವ್ಯಾಪ್ತಿಯ ಪ್ರದೇಶಗಳಿಗೆ ಗ್ರೇಟರ್ ಬೆಂಗಳೂರು ವಾಟರ್ ಸಪ್ಲೈ ಅಂಡ್ ಸಿವರೇಜ್ ಪ್ರಾಜೆಕ್ಟ್ ಯೋಜನೆಯಡಿ 507.65 ಕಿ.ಮೀ. ಉದ್ದದ ವಿವಿಧ ವ್ಯಾಸದ ನೀರಿನ ಕೊಳವೆ ಮಾರ್ಗಗಳನ್ನು ಅಳವಡಿಸಲಾಗಿದೆ. ಈ ಪ್ರದೇಶದಲ್ಲಿ ಅಂದಾಜು 80,000 ಮನೆಗಳಿದ್ದು, ಅವುಗಳಲ್ಲಿ ಮಂಡಳಿ ವತಿಯಿಂದ 38,150 ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಿದ್ದು, ಕಾವೇರಿ ನೀರು ಸರಬರಾಜು ಮಾಡಲಾಗುತ್ತಿದೆ. ಅವುಗಳ ಪೈಕಿ 15,000 ಮನೆಗಳಿಗೆ ಅಧಿಕೃತವಾಗಿ ನೀರಿನ ಸಂಪರ್ಕವನ್ನು ಮಂಜೂರಾತಿ ಮಾಡಿ, ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಇನ್ನುಳಿದ ಪ್ರದೇಶಗಳಲ್ಲಿ ಕಾವೇರಿ ನೀರನ್ನು ಹಂತ ಹಂತವಾಗಿ ಸರಬರಾಜು ಮಾಡಲು ನೀರಿನ ಕೊಳವೆಗಳನ್ನು ಮತ್ತು ಜೋಡಣೆಗಳನ್ನು ಪರೀಕ್ಷಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

(ಇ) ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಹಿಂದಿನ ಕೆ.ಆರ್.ಪುರಂ ನಗರಸಭಾ ಪ್ರದೇಶದ ಈ ಕೆಳಕಂಡ ಭಾಗಗಳಿಗೆ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ವಾರ್ಡ್ ಸಂಖ್ಯೆ: 25 ಹೊರಮಾವು (110 ಹಳ್ಳಿಗಳನ್ನು ಹೊರತುಪಡಿಸಿ) ಶೇಕಡ 90% ಭಾಗ

ವಾರ್ಡ್ ಸಂಖ್ಯೆ: 26–ರಾಮಮೂರ್ತಿ ನಗರ ಶೇಕಡ 80% ಭಾಗ

ವಾರ್ಡ್ ಸಂಖ್ಯೆ: 51– ವಿಜಿನಾಪುರ, ಶೇಕಡ 90% ಭಾಗ.

ವಾರ್ಡ್ ಸಂಖ್ಯೆ: 52– ಕೆ.ಆರ್ ಪುರಂ, ಶೇಕಡ 80% ಭಾಗ.

ವಾರ್ಡ್ ಸಂಖ್ಯೆ: 53– ಬಸವನಪುರ, ಶೇಕಡ 45% ಭಾಗ.

ವಾರ್ಡ್ ಸಂಖ್ಯೆ: 55– ದೇವಸಂದ್ರ, ಶೇಕಡ 70% ಭಾಗ.

ವಾರ್ಡ್ ಸಂಖ್ಯೆ: 56– ಎ. ನಾರಾಯಣಪುರ, ಶೇಕಡ 90% ಭಾಗ.

ವಾರ್ಡ್ ಸಂಖ್ಯೆ: 81– ವಿಜ್ಞಾನ ನಗರ, ಶೇಕಡ 95% ಭಾಗ.

ವಾರ್ಡ್ ಸಂಖ್ಯೆ: 87– ಹೆಚ್.ಎ.ಎಲ್., ಶೇಕಡ 94% ಭಾಗ

(ಈ) ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರದ 110 ಹಳ್ಳಿಗಳನ್ನು ಹೊರತುಪಡಿಸಿ ಉಳಿದ ಹಿಂದಿನ ಕೆ.ಆರ್.ಪುರಂ ನಗರಸಭೆ ಪ್ರದೇಶಗಳಿಗೆ ಕಾವೇರಿ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

(ಉ) ಪ್ರಸಕ್ತ ಸಾಲಿನಲ್ಲಿ 110 ಹಳ್ಳಿಗಳನ್ನು ಹೊರತುಪಡಿಸಿ, ಉಳಿದ ಹಿಂದಿನ ನಗರಸಭೆ ಪ್ರದೇಶಗಳ ಭಾಗಗಳಿಗೆ ಕುಡಿಯುವ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ವೈದ್ಯಾಲಯವನ್ನು ಮಂಜೂರು ಮಾಡುವುದು

554 (444) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) :– ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ದಬ್ಬೇಘಟ್ಟ ಹೋಬಳಿಯಲ್ಲಿ ಪಶು ವೈದ್ಯಾಲಯದ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;